ಸ್ವಾತಂತ್ರ್ಯದ ಅಮೃತ ಮಹೋತ್ಸವ

ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com


# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ


ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009


ಸಂಖ್ಯೆ: ಕವಿಪ್ರನಿನಿ/ಬಿ16/820/2019-20

ದಿನಾಂಕ : 12 SEP 2022

ಪ್ರಧಾನ ವ್ಯವಸ್ಥಾಪಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ)
ಕಂಪನಿ ಕಾರ್ಯಾಲಯ,
ಬೆಸ್ಕಾಂ/ಮೆಸ್ಕಾಂ/ಸೆಸ್ಕ್/ಹೆಸ್ಕಾಂ/ಜೆಸ್ಕಾಂ,
**ಬೆಂಗಳೂರು/ಮಂಗಳೂರು/ಮೈಸೂರು/ಹುಬ್ಬಳ್ಳಿ/ಕಲಬುರಗಿ.**

ಮುಖ್ಯ ಇಂಜಿನಿಯರ್(ವಿ),
ಪ್ರಸರಣ ವಲಯ/ಎಸ್.ಎಲ್.ಡಿ.ಸಿ, ಬೆಂಗಳೂರು
ಕವಿಪ್ರನಿನಿ,
**ಬೆಂಗಳೂರು/ತುಮಕೂರು/ಹಾಸನ/ಮೈಸೂರು/ಬಾಗಲಕೋಟೆ/ಕಲಬುರಗಿ.**

ಮಾನ್ಯರೆ,

**ವಿಷಯ:** ಪ್ರೊಬೇಷನರಿ ಅವಧಿಯಲ್ಲಿ ನಿಗಧಿಪಡಿಸಿರುವ ಇಲಾಖಾ ಪರೀಕ್ಷೆಗಳನ್ನು ಉತ್ತೀರ್ಣರಾಗದೇ ಇರುವಂತಹ ನೌಕರರ ಸೇವೆಯನ್ನು ವಜಾಗೊಳಿಸುವ ಬಗ್ಗೆ.

**ಉಲ್ಲೇಖ:** ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ16/820/2019-20 ದಿನಾಂಕ: 03.06.2021.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಿಗಮದ ನೌಕರರು ಪರೀಕ್ಷಾರ್ಥ ಅವಧಿಯೊಳಗೆ ನಿಗಧಿತ ವೃತ್ತಿ ಪೂರ್ವ ತರಬೇತಿ ಅಂತ್ಯದಲ್ಲಿ ನಡೆಸಲಾಗುವ ಪರೀಕ್ಷೆ ಅಥವಾ ಇತರೆ ಕಡ್ಡಾಯ ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣರಾಗದಿದ್ದಲ್ಲಿ, ಸದರಿ ನೌಕರರಿಗೆ ಅಂತಿಮವಾಗಿ ಅಂತಹ ಪರೀಕ್ಷೆಯಲ್ಲಿ ಹಾಜರಾಗಲು ಒಂದು ಬಾರಿಗೆ ಮಾತ್ರ ಕೊನೆಯ ಅವಕಾಶವನ್ನು ನೀಡುವುದು. ಮತ್ತು ಸದರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗದ ನೌಕರರ ವಿರುದ್ಧ ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಾವಳಿಗಳ ನಿಬಂಧನೆ-6 ರ ಅನ್ವಯ ಸೇವೆಯಿಂದ ವಜಾಗೊಳಿಸಲು ಸಕ್ಷಮ/ನೇಮಕಾತಿ ಪ್ರಾಧಿಕಾರಿಗಳು ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ಉಲ್ಲೇಖದ ಸುತ್ತೋಲೆಯಲ್ಲಿ ಈಗಾಗಲೇ ತಿಳಿಸಲಾಗಿರುತ್ತದೆ.

ನಿಗಮದಲ್ಲಿ ನೇಮಕಗೊಂಡ ನೌಕರರು ಪರೀಕ್ಷಾರ್ಥ ಅವಧಿಯನ್ನು ತೃಪ್ತಿಕರವಾಗಿ ಪೂರೈಸಲು ನಿಗದಿತ ವೃತ್ತಿ ಪೂರ್ವ ತರಬೇತಿ ಕೊನೆಯಲ್ಲಿ ನಡೆಸಲಾಗುವ ಪರೀಕ್ಷೆಯಲ್ಲಿ ಉತ್ತೀರ್ಣತೆ ಹೊಂದಿರಬೇಕು ಹಾಗೂ ಕನ್ನಡ ಭಾಷಾ ಪರೀಕ್ಷೆಯಿಂದ ವಿನಾಯಿತಿ ಹೊಂದಿರಬೇಕು ಅಥವಾ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕಿರುತ್ತದೆ. ಅಲ್ಲದೇ, ಸಹಾಯಕ ಲೆಕ್ಕಾಧಿಕಾರಿ ಹುದ್ದೆಗೆ ನೇರವಾಗಿ ನೇಮಕ ಹೊಂದುವ

ಅಧಿಕಾರಿಗಳು ಪರೀಕ್ಷಾರ್ಥ ಅವಧಿಯನ್ನು ತೃಪ್ತಿಕರವಾಗಿ ಪೂರೈಸಲು ಎಸ್.ಎ.ಎಸ್ ಭಾಗ-1 ಹಾಗೂ 2 ರ ಪರೀಕ್ಷೆಯಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗಬೇಕಿರುತ್ತದೆ. ಮೇಲ್ಕಂಡ ಸುತ್ತೋಲೆಯನ್ನು ಹೊರಡಿಸಿದ ನಂತರ ಇತ್ತೀಚೆಗೆ ನಿಗಮದಲ್ಲಿ ವೃತ್ತಿಪೂರ್ವ ತರಬೇತಿ ಹಾಗೂ ಇಲಾಖಾ ಪರೀಕ್ಷೆಗಳನ್ನು ನಡೆಸಲಾಗಿದ್ದು, ಫಲಿತಾಂಶಗಳನ್ನು ಈಗಾಗಲೇ ಪ್ರಕಟಿಸಲಾಗಿರುತ್ತದೆ.

ಆದ್ದರಿಂದ, ಪರೀಕ್ಷಾರ್ಥ ಅವಧಿ ಘೋಷಿಸಲು, ನಿಯಮಾನುಸಾರ ವೃತ್ತಿಪೂರ್ವ ತರಬೇತಿಯ ಪರೀಕ್ಷೆ ಹಾಗೂ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗದೇ ಇರುವ ಅಧಿಕಾರಿ ಹಾಗೂ ನೌಕರರ ವಿವರ ಹಾಗೂ ತತ್ಸಂಬಂಧ ಸದರಿಯವರುಗಳ ವಿರುದ್ಧ ನಿಗಮದ ದಿನಾಂಕ: 03.06.2021 ರ ಸುತ್ತೋಲೆಯ ಪ್ರಕಾರ ಕೈಗೊಂಡಿರುವ ಕ್ರಮದ ಬಗ್ಗೆ ಈ ಕೆಳಕಂಡ ನಮೂನೆಯಲ್ಲಿ ವರದಿಯನ್ನು 7 ದಿನಗಳ ಒಳಗಾಗಿ ಸಲ್ಲಿಸುವಂತೆ ತಿಳಿಸಲಾಗಿದೆ.

<u>ಕಂಪನಿ/ಪ್ರಸರಣ ವಲಯದ ಹೆಸರು:</u>

| ಕ್ರಮ ಸಂಖ್ಯೆ | ಅಧಿಕಾರಿ/ನೌಕರರ ಹೆಸರು ಮತ್ತು ಹುದ್ದೆ | ನಿಯಮಾನುಸಾರ ಪರೀಕ್ಷಾರ್ಥ ಅವಧಿ ತೃಪ್ತಿಕರವಾಗಿ ಪೂರೈಸಬೇಕಾಗಿದ್ದ ದಿನಾಂಕ | ವೃತ್ತಿ ಪೂರ್ವ/ಕನ್ನಡ/ ಇಲಾಖಾ ಪರೀಕ್ಷೆಯ ವಿವರ | ಈವರೆವಿಗೂ ಪರೀಕ್ಷೆಗೆ ಹಾಜರಾಗಿರುವ ಪ್ರಯತ್ನಗಳ ಸಂಖ್ಯೆ | ಉತ್ತೀರ್ಣರಾಗದೇ ಇರುವುದಕ್ಕೆ ಕೈಗೊಂಡಿರುವ ಕ್ರಮ |
|---|---|---|---|---|---|
| 1 | 2 | 3 | 4 | 5 | 6 |
| 1 | | | | | |
| 2 | | | | | |
| 3 | | | | | |

ತಮ್ಮ ವಿಶ್ವಾಸಿ,

ನಿರ್ದೇಶಕರು

(ಆಡಳಿತ ಮತ್ತು ಮಾನವ ಸಂಪನ್ಮೂಲ)

ಪ್ರತಿಯನ್ನು:

1. ಸಹಾಯಕ ಪ್ರಧಾನ ವ್ಯವಸ್ಥಾಪಕರು (ಆಡಳಿತ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು ಇವರ ಮಾಹಿತಿಗಾಗಿ ರವಾನಿಸುತ್ತಾ, ಮೇಲ್ಕಂಡ ನಮೂನೆಯಲ್ಲಿ ವಿವರಗಳನ್ನು ಸಲ್ಲಿಸುವಂತೆ ಸೂಚಿಸಿದೆ.
2. ವ್ಯವಸ್ಥಾಪಕರು (ನಗದು ಮತ್ತು ಲೆಕ್ಕಗಳು), ಇವರ ಮಾಹಿತಿಗಾಗಿ ರವಾನಿಸುತ್ತಾ, ಮೇಲ್ಕಂಡ ನಮೂನೆಯಲ್ಲಿ ವಿವರಗಳನ್ನು ಸಲ್ಲಿಸುವಂತೆ ಸೂಚಿಸಿದೆ